"1995ರ ಕರ್ನಾಟಕ ವಿಶೇಷ ನ್ಯಾಯಾಧಿಕರಣ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆಯನ್ನು ನೀಡ ಲಾಯಿತು.

ಅಧ್ಯಕ್ಷರು :- ಈಗ ಗಮನ ಸೆಳೆಯುವ ಸೂಚನೆಗಳು 351 ಮತ್ತು ಮಂಡ್ಯ ಜಿಲ್ಲೆಯ ಸನ್ಮಾನ್ಯ ಶಾಸಕ ಮಿತ್ರರುಗಳು ಪ್ರಸ್ತಾಪಿಸಿರುವ ವಿಷಯವನ್ನು ಊಟದ ನಂತರ ತೆಗೆದುಕೊಳ್ಳ ಲಾಗುವುದು.

ವಿಷಯ :- ಕರ್ನಾಟಕ ಆಗ್ರೋ ಇಂಡಸ್ಟ್ರೀಯಲ್ಲಿ ಆಗುತ್ತಿರುವ ನಷ್ಟದ ಬಗ್ಗೆ.

+**ಶ್ರೀ ಜಿ. ಬಿ. ಶಿವಕುಮಾರ್ :-** ಮಾನ್ಯ ಅಧ್ಯಕ್ಷರೇ, ನಾನು ಶೂನ್ಯವೇಳೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಉಪಾಧ್ಯಕ್ಷರ ಅಪ್ಪಣೆಯನ್ನು ಕೂಡ ಪಡೆದಿದ್ದೆ. ನಮ್ಮ ವ್ಯವಸಾಯ ಸಚಿವರು ಇಲ್ಲಿದ್ದಾರೆ. ಒಂದೇ ಒಂದು ನಿಮಿಷ ಅವಕಾಶ ಕೊಡಬೇಕು. ಕರ್ನಾಟಕ ಆಗ್ರೋ ಇಂಡಸ್ಟ್ರೀಸ್‌ದು ಏನೆಂದರೆ ತಾವು ಕೂಡ ಸಾರ್ವಜನಿಕ ಉದ್ದಿಮೆಗಳ ಅಧ್ಯಕ್ಷರಾಗಿದ್ದಂಥವರು. ನಾನು ವಿಧಾನಪರಿಷತ್ತಿನಲ್ಲಿ ಈ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಬಗ್ಗೆ ಸುಮಾರು ಮೂರು ಬಾರಿ ಪ್ರಸ್ತಾಪ ಮಾಡಿದ್ದೆ. ಇವತ್ತು ಯಾವ ಒಂದು ಸಂಸ್ಥೆ ರೈತರಿಗೋಸ್ಕರ, ಅವರ ಉದ್ಧಾರಕ್ಕೋಸ್ಕರ ಸುಮಾರು ಕಳೆದ ಇಪ್ಪತ್ತೈದು ವರ್ಷದ ಹಿಂದೆ ಪ್ರಾರಂಭವಾಯಿತೋ ಇವತ್ತು ರೈತರ ಪಾಲಿಗೆ ಶಾಪವಾಗಿರುವುದು ನಮ್ಮ ಮಾನ್ಯ ಸಚಿವರಿಗೆ ಗೊತ್ತಿದೆ. ತಮ್ಮ ಮೂಲಕ ನಾನು ಮಾನ್ಯ ಕೃಷಿ ಸಚಿವರನ್ನು ಕೇಳುತ್ತೇನೆ. ಬಹುಶಃ ಇವರು ಐದನೇ ಮಂತ್ರಿಯವರು ನಾನು ಪ್ರಸ್ತಾಪಮಾಡುತ್ತಿರುವಂಥದ್ದು. ಮೊದಲಿಗೆ ಕೆ. ಹೆಚ್. ಪಾಟೀಲರು ವ್ಯವಸಾಯ ಸಚಿವರಾಗಿದ್ದರು, ಆಮೇಲೆ ಪುಟ್ಟಸ್ವಾಮಿಗೌಡರು, ಆಮೇಲೆ ಚಿಕ್ಕೇಗೌಡರು, ಆಮೇಲೆ ಹೆಚ್. ಕೆ. ಪಾಟೀಲರು, ಈಗ ನಮ್ಮ ಸರ್ಕಾರ ಇದೆ, ನಮ್ಮ ಮಂತ್ರಿಗಳು ಇದ್ದಾರೆ. ನನಗೆ ಒಂದು ವಿಶ್ವಾಸ ಇದೆ. ಅವರು ಬಹಳ ಕಠಿಣ ಮನಸ್ಸಿನ ವ್ಯಕ್ತಿ, ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬಹುದು, ಜೊತೆಗೆ ತಾವು ಅಧ್ಯಕ್ಷರಾಗಿರುವುದು ಒಂದು ಅದೃಷ್ಟವೇ. ಏಕೆಂದರೆ ತಾವು ಸಾರ್ವಜನಿಕ ಉದ್ದಿಮೆ ಸಮಿತಿಯ ಅಧ್ಯಕ್ಷರಾಗಿ ಇದರ ಯೋಗ್ಯತೆಯನ್ನು ಸಾಕಷ್ಟು ಬರೆದಿದ್ದೀರಿ. ಇವತ್ತು ಯಾವ ಒಂದು ಸಂಸ್ಥೆ ರೈತರಿಗೆ ಉಪಯೋಗವಾಗಬೇಕಾದಂಥ ಸಂಸ್ಥೆ ಕೋಟ್ಯಾಂತರ ರೂಪಾಯಿಗಳ ನಷ್ಟ ಅನುಭವಿಸಿದೆ. ಜೊತೆಗೆ ಅಲ್ಲಿ ಮತ್ತೊಂದು ಏನೆಂದರೆ ಯಾರು ನ್ಯಾಯವನ್ನು ಪ್ರತಿಪಾದನೆ ಮಾಡಿದಂಥ ಕಾರ್ಮಿಕರನ್ನು ಅಮಾನತ್ತಿನಲ್ಲಿಟ್ಟಿದ್ದಾರೆ. ನಾನು ಇದರ ಬಗ್ಗೆ ಸವಿಸ್ತಾರವಾಗಿ ಮಾನ್ಯ ಕೃಷಿ ಸಚಿವರಿಂದ ಆ ಒಂದು ಹೇಳಿಕೆ ಬರಬೇಕು ಎಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :- ಊಟದ ನಂತರ ಸನ್ಮಾನ್ಯ ಮಂತ್ರಿಗಳು ವಿವರವಾದಂಥ ಉತ್ತರವನ್ನು ಕೊಡುತ್ತಾರೆ. ಅವರಿಗೆ ಕಠಿಣ ಮನಸ್ಸು ಇಲ್ಲ. ಬಹಳ ಮೆದು ಮನಸ್ಸು ಕ್ರಮ ಕಠಿಣವಾಗಿರು ತ್ತದೆ. ಸಭೆಯನ್ನು ಈಗ ಮುಂದೂಡಿ ಪುನಃ 3 ಗಂಟೆಗೆ ಸಮಾವೇಶಗೊಳ್ಳುತ್ತೆ.

(ಸಭೆಯು 1-26 ಕ್ಕೆ ಮುಂದೂಡಲ್ಪಟ್ಟಿತು. ಪುನಃ ಸದನವು 3 ಗಂಟೆಗೆ ಸಮಾವೇಶಗೊಳ್ಳುವುದು.)

(ಸಭೆಯು ಮದ್ಯಾಹ್ನ 3-30 ನಿಮಿಷಕ್ಕೆ ಸಮಾವೇಶಗೊಂಡಿತು)